ಕರ್ನಾಟಕ ಸರ್ಕಾರ
ಹೇಳಿಕೆ ಹಾಳೆ
(ಆರ್ ಪಿ ಸಂಖ್ಯೆ57)
ನಮೂನೆ ಸಂಖ್ಯೆ4

ಸಿ ಆರ್ ಪಿ 67

<u>ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಸಿಂಧನೂರು</u>

<u>CC No.739/2014 CW-2 PW- 3</u>

| | | |
|---|---|---|
| ಹೆಸರು | : | ವಿಜಯಕುಮಾರ |
| ತಂದೆಯ/ಗಂಡನ ಹೆಸರು | : | ವೀರಭದ್ರಪ್ಪ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಮ್ಯಾನೇಜರ |
| ವಾಸಸ್ಥಳ | : | ನರಸಾಪೂರ, ತಾಃ ಗಂಗಾವತಿ |

ಸಾಕ್ಷಿಗೆ ಪ್ರಮಾಣ ವಚನ ಬೋದಿಸಿದ ದಿನಾಂಕಃ 10-10-2022

<u>ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದ</u>

2005 ರಿಂದ ಡಿಸೆಂಬರ 2013 ರವರೆಗೆ ಶ್ರೀರಾಮ ಚಿಟ್ ಫಂಡ ಸಿಂಧನೂರು ಸಂಸ್ಥೆ ಯಲ್ಲಿ ವಿಭಾಗೀಯ ಶಾಖಾ ವ್ಯವಸ್ಥಾಪಕರಾಗಿ ನಾನು ಕೆಲಸ ನಿರ್ವಹಿಸಿದ್ದೇನೆ.

ಚಾಸಾ-1, 3, 5 ರಿಂದ 23 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. ಚಾಸಾ-1 ರವರು ಶಾಖಾ ವ್ಯವಸ್ಥಾಪಕರಾಗಿದ್ದರು. ಚಾಸಾ-3 ರವರು ಬಂಗಾರದ ಸಾಲದ ಶಾಖೆಯ ವ್ಯವಸ್ಥಾಪಕರಾಗಿದ್ದರು. ಚಾಸಾ-5 ರಿಂದ 23 ರವರು ನಮ್ಮ ಶಾಖೆಯ ಗ್ರಾಹಕರು ಇರುತ್ತಾರೆ.

1 ನೇ ಆರೋಪಿಯು ಬಂಗಾರ ಸಾಲದ ವ್ಯವಸ್ಥಾಪಕರಾಗಿ ಕೆಲಸ ನಿರ್ವಹಿಸುತ್ತಿದ್ದರು. 2 ನೇ ಆರೋಪಿಯು ಬಂಗಾರ ಸಾಲದ ಶಾಖೆಯ ಸಹಾಯಕರಾಗಿ ಕೆಲಸ ನಿರ್ವಹಿಸುತ್ತಿದ್ದರು.

ದಿಃ 24-06-2013 ರಂದು ನಮ್ಮ ಶಾಖೆಯ ಲೆಕ್ಕ ಪರಿಶೋಧನೆಗಾಗಿ ಚೆನ್ನೈನಿಂದ ಲೆಕ್ಕಪರಿಶೋಧಕರು ಬಂದಿದ್ದರು. ಅವರು ಲೆಕ್ಕ ಪರಿಶೋಧನೆ ಮಾಡಿದಾಗ ಎಲ್ಲ ಸರಿ ಇತ್ತು. ಅದೇರೀತಿ ದಿಃ 23-08-2013 ರಂದು ಪುನಃ ಅದೇ ಲೆಕ್ಕ ಪರಿಶೋಧಕರು ಲೆಕ್ಕ ಪರಿಶೋಧನೆಗಾಗಿ ನಮ್ಮ ಶಾಖೆಗೆ ಬಂದಿದ್ದರು. ಲೆಕ್ಕ ಪರಿಶೋಧನೆಯ ಸಂದರ್ಭದಲ್ಲಿ ಅವ್ಯವಹಾರವಾಗಿದೆ ಎಂದು ನಾನು ಗಂಗಾವತಿಯಲ್ಲಿದ್ದಾಗ, ಪೋನ ಕರೆ ಮಾಡಿ ತಿಳಿಸಿದರು. ಆಗ ನಾನು ಮತ್ತು ಚಾಸಾ-3 ರವರು ಗಂಗಾವತಿಯಲ್ಲಿ ಕೆಲಸ ಮಾಡುತ್ತಿದ್ದೆವು. ಅದೇದಿನ ಮಧ್ಯಾಹ್ನ 12-00 ಗಂಟೆಗೆ ನಾನು ಮತ್ತು ಚಾಸಾ-3 ರವರು ಸೇರಿ ಸಿಂಧನೂರು ಶಾಖೆಗೆ ಬಂದು ಲೆಕ್ಕ ಪರಿಶೋಧಕರನ್ನು ವಿಚಾರಿಸಲಾಗಿ, ದಿಃ 25-06-2013 ರಿಂದ 25-08-2013 ರಲ್ಲಿ ಎರಡು ಜನ ಆರೋಪಿತರು ಸೇರಿ ಕೆಲವು

ಗ್ರಾಹಕರಿಂದ ಬಂಗಾರದ ಸಾಲದ ಹಣವನ್ನು ಪಡೆದುಕೊಂಡು ಬಂಗಾರವನ್ನು ಗ್ರಾಹಕರಿಗೆ ನೀಡಿ, ಆ ಸಾಲದ ಹಣವನ್ನು ಬ್ಯಾಂಕಿಗೆ ಡಿಪಾಸಿಟ್ ಮಾಡದೇ ಸ್ವಂತಕ್ಕೆ ಬಳಸಿಕೊಂಡು, ಗ್ರಾಹಕರಿಂದ ಪಡೆದ ಬಂಗಾರದ ತೂಕದಷ್ಟು ಆ ಬಂಗಾರದ ಇಟ್ಟಿರುವ ಪ್ಯಾಕೆಟಗಳಲ್ಲಿ ಇಟ್ಟಿಗೆ, ಕಲ್ಲು, ಕಾಲು ಚೈನು, ಕೀಚೈನು, 5 ರೂ. ನಾಣ್ಯಗಳನ್ನು ಇಟ್ಟು ಮತ್ತು ಕೇಲವು ಪ್ಯಾಕೇಟಗಳನ್ನು ಖಾಲಿ ಇಟ್ಟು ಅವ್ಯವಹಾರ ಮಾಡಿದ ಬಗ್ಗೆ ತಿಳಿದು ಬಂತು.ಒಟ್ಟು 54,70,900/- ಹಣ ದುರುಪಯೋಗವಾಗಿದೆ ಎಂದು ಗೊತ್ತಾಯಿತು. ಈ ಬಗ್ಗೆ ನಾವು 1 ನೇ ಆರೋಪಿಯನ್ನು ವಿಚಾರಿಸಿದೆವು. ಅವರು ಅವ್ಯವಹಾರ ಆಗಿರುವ ಬಗ್ಗೆ ಒಪ್ಪಿಕೊಂಡು ಒಪ್ಪಿಗೆ ಪತ್ರ ವನ್ನು ಬರೆದುಕೊಟ್ಟರು.

ಬಂಗಾರದ ಲಾಕರ್ ಕೀಗಳ ಪೈಕಿ ಒಂದು 1 ನೇ ಆರೋಪಿ ಬಳಿ ಇನ್ನೊಂದು 2 ನೇ ಆರೋಪಿ ಬಳಿ ಇದ್ದವು. ಎರಡನೇ ಆರೋಪಿ ಬಳಿ ಇದ್ದ ಕೀಯನ್ನು ನೇ ಆರೋಪಿಗೆ ನೀಡಿ ಅವ್ಯವಹಾರ ಮಾಡಿದ ಬಗ್ಗೆ ಗೊತ್ತಾಯಿತು. ಈ ಬಗ್ಗೆ ಚಾಸಾ-1 ರವರು ಆರೋಪಿತರ ಮೇಲೆ ದೂರು ನೀಡಿದ್ದಾರೆ. ಈ ಬಗ್ಗೆ ಪೋಲೀಸರು ನನ್ನನ್ನು ವಿಚಾರಿಸಿದ್ದಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿತರು ಗೈರು ಹಾಜರಿದ್ದು ಅವರ ಪರ ವಕೀಲರು ಗುರುತಿಸುವಿಕೆ ಬಗ್ಗೆ ಯಾವುದೇ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಚಾಸಾ-5 ರಿಂದ 23 ರ ಪೈಕಿ 13 ಗ್ರಾಹಕರ ಹೆಸರಿನಲ್ಲಿ ಸುಳ್ಳು ಖಾತೆಗಳನ್ನು ತೆರೆದು ಖಾಲಿ ಪ್ಯಾಕೆಟಗಳಿಗೆ ಸಾಲವನ್ನು ತೋರಿಸಿ ಆ ಹಣವನ್ನು ಎರಡು ಜನ ಆರೋಪಿತರು ತಮ್ಮ ಸ್ವಂತಕ್ಕೆ ದುರುಪಯೋಗಪಡಿಸಿಕೊಂಡಿದ್ದರು.

<u>ಪಾಟೀ ಸವಾಲುಃ **2** ನೇ ಆರೋಪಿ ಪರ ವಕೀಲರಿಂದ</u>

ದಿಃ 24-08-2013 ರಂದು ನಾನು ವಿಭಾಗೀಯ ವ್ಯವಸ್ಥಾಪಕ ಎಂದು ಕೆಲಸ ನಿರ್ವಹಿಸುತ್ತಿದ್ದೆ, ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಗಂಗಾವತಿ, ಸಿಂಧನೂರು, ಲಿಂಗಸಗೂರು ಮತ್ತು ಸಿರಗುಪ್ಪ ಬರುತ್ತಿದ್ದವು.

ಸಿಂಧನೂರು ಶಾಖೆಯಲ್ಲಿ ಒಟ್ಟು 26 ಜನ ಸಿಬ್ಬಂದಿ ಕೆಲಸ ಮಾಡುತ್ತಿದ್ದರು. ಸಿಂಧನೂರು ಶಾಖೆಯ ಬಂಗಾರದ ಸಾಲದ ವಿಭಾಗದಲ್ಲಿ ಎರಡು ಜನ ಕೆಲಸ ಮಾಡುತ್ತಿದ್ದರು.

ಪ್ರತಿವಾರಕ್ಕೊಮ್ಮೆ ದಾಸ್ತಾನು ವಹಿ ಮತ್ತು ದಾಸ್ತಾನನ್ನು ಹೋಲೀಕೆ ಮಾಡಿ ನೋಡುವ ಅಧಿಕಾರ ಚಾಸಾ-1 ರವರಿಗೆ ಇರುತ್ತದೆ ಎಂದರೆ ಸರಿ, ಆದರೆ ಬಂಗಾರದ ಪ್ಯಾಕೆಟಗಳನ್ನು ತೆರೆದು ನೋಡುವ ಅಧಿಕಾರ ಇರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಬಂಗಾರ ಸಾಲ ಪಡೆದ ಗ್ರಾಹಕರು

ಸಾಲ ಮರುಪಾವತಿಸಿ ಬ್ಯಾಂಕಿಗೆ ಜಮಾ ಮಾಡಿರುವುದನ್ನು ನೋಡುವ ಅಧಿಕಾರ ಚಾಸಾ-1 ರವರಿಗೆ ಇದೆ, ಆದರೆ ಅದನ್ನು ಜಮೆ ಮಾಡುವುದು 1 ನೇ ಆರೋಪಿಯ ಜವಾಬ್ದಾರಿ ಇದೆ.

ತಪಾಸಣಾ ವಹಿ ಇರುತ್ತದೆ ಎಂದರೆ ಸರಿ ಅಲ್ಲ. ಪ್ರತಿವಾರ ತಪಾಸಣೆ ಮಾಡಿದ್ದನ್ನು ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವುದಿಲ್ಲ. ಪ್ರತಿವಾರ ತಪಾಸಣೆ ಮಾಡಿದ ಬಗ್ಗೆ ಚಾಸಾ-1 ರವರು ವರದಿ ತಯಾರಿಸುತ್ತಿರಲಿಲ್ಲ.

ಆರೋಪಿತರು ಗೈರು ಹಾಜರಿದ್ದ ಸಂದರ್ಭದಲ್ಲಿ ಬೇರೆ ಸಿಬ್ಬಂದಿ ಅವರ ಪ್ರಭಾರದಲ್ಲಿ ಇದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ಬಂಗಾರ ಸಾಲ ಮಂಜೂರಾತಿ ಮಾಡುವ ಮತ್ತು ಬಂಗಾರ ಸಾಲ ಮರುಪಾವತಿ ಪಡೆಯುವ ಕೆಲಸ ಮಾಡುವುದಿಲ್ಲ, ಕೇವಲ ಲಾಕರ್ ಕೀ ಗಳನ್ನು ಇಟ್ಟುಕೊಂಡು ನಂತರ ಅವರಿಗೆ ವಹಿಸಿಕೊಡುತ್ತಾರೆ. ಆರೋಪಿತರುರಜೆ ಮೇಲೆ ಇದ್ದಾಗ, ಪ್ರಭಾರದಲ್ಲಿದ್ದ ಸಿಬ್ಬಂದಿ ಆರೋಪಿತರು ನಿರ್ವಹಿಸುವ ಕೆಲಸ ಮಾಡುತ್ತಿರಲಿಲ್ಲ. ಸಾಕ್ಷಿ ಮುಂದುವರೆದ ಅವರಿಗೆ ತರಬೇತಿ ಇಲ್ಲದ ಕಾರಣ ಆ ಕೆಲಸ ಮಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ಇಲ್ಲದ ಸಂದರ್ಭದಲ್ಲಿ ಇಷ್ತಿಕಾರ ಹುಸೇನ ಮತ್ತು ಶಿವಕುಮಾರ ಎನ್ ರವರು ಆರೋಪಿತರ ಕೆಲಸಗಳನ್ನು ನಿರ್ವಹಿಸುತ್ತಿದ್ದರು ಎಂದರೆ ಸರಿ ಅಲ್ಲ. ಕೇವಲ ಲಾಕರ್ ಕೀ ಗಳನ್ನು ಮಾತ್ರ ಪಡೆದುಕೊಳ್ಳುತ್ತಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ.

ಯಾರು ಬಂಗಾರ ಸಾಲದ ಶಾಖೆಯ ಪ್ರಭಾರ ವಹಿಸಿಕೊಳ್ಳುತ್ತಾರೋ ಅವರು ದಾಸ್ತಾನು ವಹಿಯನ್ನು ಮತ್ತು ದಾಸ್ತಾನನ್ನು ಪರೀಶೀಲಿಸಿ ಪ್ರಭಾರ ವಹಿಸಿಕೊಳ್ಳುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ಯಾಕೆಟಗಳನ್ನು ಎಣಿಸಿ ಪ್ರಭಾರ ವಹಿಸಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ಪ್ರಭಾರ ವಹಿಸಿಕೊಂಡವರು ಬಂಗಾರ ಸಾಲ ಮರುಪಾವತಿಸಿದ್ದನ್ನು ಬ್ಯಾಂಕಿಗೆ ಜಮೆ ಮಾಡಲಾಗಿದೆಯೋ ಇಲ್ಲವೋ ಎಂದು ಪರೀಶೀಲನೆ ಮಾಡುತ್ತಾರೆ. ನಾನು ಲೆಕ್ಕ ಪರಿಶೋಧನಾ ವರದಿಯನ್ನು ನೋಡಿದ್ದೇನೆ. ನಾನು ಲೆಕ್ಕ ಪರಿಶೋಧನಾ ವರದಿಯನ್ನು ಪೋಲೀಸರಿಗೆ ನೀಡಿಲ್ಲ. ಚಾಸಾ-1 ರವರು ನೀಡಿರಬಹುದು, ನನಗೆ ಗೊತ್ತಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.

ಇಫ್ತೇಕಾರ ಹುಸೇನ ಮತ್ತು ಶಿವಕುಮಾರ ಎನ್ ರವರು ಕೂಡಾ ಬಂಗಾರ ಸಾಲದ ಲಾಕರ್ ನ ಕೀಗಳನ್ನು ಉಪಯೋಗಿಸಿದ್ದಾರೆ ಎಂದರೆ, ಕೇವಲ ಸುಪರ್ದಿಗೆ ಪಡೆದಿದ್ದಾರೆ ಉಪಯೋಗಿಸಿದ ಬಗ್ಗೆ ನನಗೆ ಗೊತ್ತಿಲ್ಲ.

ಸಾಲ ನೀಡುವ ಮತ್ತು ಮರುಪಾವತಿ ಮಾಡುವುದು ವ್ಯವಸ್ಥಾಪಕರ ವ್ಯಾಪ್ತಿಯಲ್ಲಿ ನಡೆಯುತ್ತದೆ ಎಂದರೆ, ಸಾಕ್ಷಿಯು ಬಂಗಾರ ಸಾಲದ ಶಾಖೆಯ ವ್ಯವಸ್ಥಾಪಕರು ನಿರ್ವಹಿಸುತ್ತಾರೆ ಎಂದು ನುಡಿಯುತ್ತಾರೆ. ಸಾಲ ನೀಡುವಾಗ ಮತ್ತು ಮರುಪಾವತಿಸುವ ಸಂದರ್ಭದಲ್ಲಿ ದಾಖಲೆಗಳಿಗೆ ಶಾಖಾ ವ್ಯವಸ್ಥಾಪಕರ ಸಹಿ ಬೇಕಾಗುವುದಿಲ್ಲ.

ಲೆಕ್ಕ ಪರಿಶೋಧನೆ ಮಾಡಿದಾಗ ಕೇಲವು ಪಾಕೆಟಗಳಲ್ಲಿ ಇಟ್ಟಿಗೆ, ಕಲ್ಲು, ಕಾಲು ಚೈನು ಮತ್ತು 5 ರೂಪಾಯಿ ನಾಣ್ಯಗಳು ಇದ್ದವು ಎಂದು ಕಂಡುಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಈ ಬಗ್ಗೆ ಆರೋಪಿತರನ್ನು ವಿಚಾರಿಸಿದೆವು ಅವರು ಒಪ್ಪಿಗೆ ಪತ್ರ ಬರೆದುಕೊಟ್ಟರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ನಾನು ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದುದ್ದರಿಂದ ಸಂಸ್ಥೆಯ ಪರವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಯಾವ ಯಾವ ಗ್ರಾಹಕರ ಖಾತೆಗಳನ್ನು ತೆರೆಯಲಾಗಿತ್ತು ಎಂದು ನಾನು ಪೋಲೀಸರಿಗೆ ಹೇಳಿಲ್ಲ, ಆದರೆ ಚಾಸಾ-1 ರವರು ಹೇಳಿರುತ್ತಾರೆ. ನಾನು ಹೇಳಿದಂತೆ ಆರೋಪಿತರು ಯಾವುದೇ ಅವ್ಯವಹಾರ ಮಾಡಿಲ್ಲ ಎಂದರೆ ಸರಿ ಅಲ್ಲ.

<u>ಪಾಟೀ ಸವಾಲುಃ **1** ನೇ ಆರೋಪಿ ಪರ ವಕೀಲರಿಂದ</u>

1 ನೇ ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಶ್ರೀ ಬಿ ಬಿ ಎ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ಯಾವುದೇ ಸಕಾರಣ ಕಂಡುಬರದಿದ್ದರಿಂದ ಅವರ ಕೋರಿಕೆಯನ್ನು ತಿರಸ್ಕರಿಸಿ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.